Teachingninja.in

Latest Govt Job updates

Private Job updates

Free Mock tests available

Visit - teachingninja.in

# KPSC
# KAS
## Previous Year Paper
### Mains General Studies
### 2010

Teachingninja.in

CC

P 2010

# GENERAL STUDIES

## Paper 1

*Time : 3 Hours ]* *[ Maximum Marks : 300*

### INSTRUCTIONS

*Each question is printed both in English and in Kannada. If any confusion arises in the Kannada version, please refer to the English Version of the questions.*

*Answers must be written in the medium specified (English or Kannada) in the Admission Ticket issued to you, which must be stated clearly on the cover of the answer book in the space provided for this purpose. No credit will be given for the answers written in a medium other than that specified in the Admission Ticket.*

*Candidates should attempt questions from all Parts.*

*The number of marks carried by each question is indicated with the question.*

*The length of the answers should not, as far as possible, exceed the specification given for the question.*

**ವಿಶೇಷ ಸೂಚನೆ :** *ಈ ಮೇಲ್ಕಂಡ ಸೂಚನೆಗಳ ಕನ್ನಡ ಭಾಷಾಂತರವನ್ನು ಈ ಪ್ರಶ್ನೆ ಪತ್ರಿಕೆಯ ಕೊನೆಯ ಪುಟದಲ್ಲಿ ಮುದ್ರಿಸಲಾಗಿದೆ.*

SEAL

Teachingninja.in

## PART A

1. Answer any ***two*** of the following questions in not more than 200 – 250 words each : *20×2=40*

   (a) What were the differences in the ideas and programmes of the Moderates and Extremists in the Indian National Congress ?

   (b) Briefly discuss the contribution of the Swaraj Party to the Indian National Movement.

   (c) Assess the work of Sir M. Visveswaraiah in Mysore as Dewan, keeping in view his slogan : "Plan, promote and encourage developments".

   (d) Discuss the echoes of 1857 Revolt in Karnataka.

2. Answer any ***four*** of the following questions in about 100 – 120 words each : *10×4=40*

   (a) Summarise the early experiments of Gandhiji at Champaran, Kheda and Ahmedabad.

   (b) Estimate the development of Vernacular Press in the second half of the nineteenth century.

   (c) Briefly explain the rise of peasant uprisings in the latter half of the nineteenth century.

   (d) Explain anti-colonial struggle in the Princely States of India.

   (e) Elaborate the British attempts at negotiated settlements after the Second World War in India.

   (f) Write a note on the impact of Quit India Movement in Karnataka.

Teachingninja.in

## ಭಾಗ A

1. ಈ ಕೆಳಗಿನ ಯಾವುದಾದರೂ **ಎರಡು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಉತ್ತರ ಸುಮಾರು 200 ರಿಂದ 250 ಪದಗಳಷ್ಟಿರಲಿ. *20×2=40*

   (a) ಭಾರತದ ರಾಷ್ಟ್ರೀಯ ಕಾಂಗ್ರೆಸ್ಸಿನ ಸೌಮ್ಯವಾದಿಗಳು ಹಾಗೂ ಉಗ್ರವಾದಿಗಳ ವಿಚಾರ ಮತ್ತು ಕಾರ್ಯಕ್ರಮಗಳಲ್ಲಿದ್ದ ವ್ಯತ್ಯಾಸಗಳೇನು ?

   (b) ಭಾರತದ ರಾಷ್ಟ್ರೀಯ ಚಳುವಳಿಗೆ ಸ್ವರಾಜ್ ಪಕ್ಷದ ಕೊಡುಗೆಯನ್ನು ಕುರಿತು ಸಂಕ್ಷಿಪ್ತವಾಗಿ ಚರ್ಚಿಸಿ.

   (c) "ಅಭಿವೃದ್ಧಿಗಳನ್ನು ಯೋಜಿಸಿ, ಪ್ರವರ್ಧಿಸಿ ಮತ್ತು ಪ್ರೋತ್ಸಾಹಿಸಿ" ಎಂಬ ತಮ್ಮ ಘೋಷಣೆಯ ಹಿನ್ನೆಲೆಯಲ್ಲಿ ಸರ್ ಎಂ. ವಿಶ್ವೇಶ್ವರಯ್ಯನವರು ಮೈಸೂರಿನಲ್ಲಿ ದಿವಾನರಾಗಿ ಮಾಡಿದ ಕೆಲಸಗಳ ಮೌಲ್ಯಮಾಪನಮಾಡಿ.

   (d) 1857 ರ ದಂಗೆಯು ಕರ್ನಾಟಕದಲ್ಲಿ ಯಾವ ರೀತಿ ಪ್ರತಿಧ್ವನಿಸಿತು ಎಂಬುದನ್ನು ಕುರಿತು ಚರ್ಚಿಸಿ.

2. ಈ ಕೆಳಗಿನ ಯಾವುದಾದರೂ **ನಾಲ್ಕು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಉತ್ತರ ಸುಮಾರು 100 – 120 ಪದಗಳಷ್ಟಿರಲಿ : *10×4=40*

   (a) ಗಾಂಧೀಜಿಯವರು ಚಂಪಾರಣ್ಯ, ಖೇಡ್ ಮತ್ತು ಅಹಮದಾಬಾದ್‌ಗಳಲ್ಲಿ ನಡೆಸಿದ ಆರಂಭದ ಪ್ರಯೋಗಗಳ ಸಾರಾಂಶವನ್ನು ನಿರೂಪಿಸಿ.

   (b) ಹತ್ತೊಂಭತ್ತನೇ ಶತಮಾನದ ದ್ವಿತೀಯಾರ್ಧದಲ್ಲಿ ದೇಶೀಯ ಭಾಷಾ ಪತ್ರಿಕೆಗಳ ಬೆಳವಣಿಗೆಯನ್ನು ಕುರಿತು ವಿವೇಚಿಸಿ.

   (c) ಹತ್ತೊಂಭತ್ತನೇ ಶತಮಾನದ ಉತ್ತರಾರ್ಧದಲ್ಲಿ ರೈತ ಬಂಡಾಯಗಳು ತಲೆ ಎತ್ತಿದ್ದನ್ನು ಸಂಕ್ಷಿಪ್ತವಾಗಿ ವಿವರಿಸಿ.

   (d) ಭಾರತದಲ್ಲಿ ಅರಸರ ಆಳ್ವಿಕೆಯ ರಾಜ್ಯಗಳಲ್ಲಿ ವಸಾಹತುಶಾಹಿ ವಿರೋಧದ ಹೋರಾಟ ಹೇಗಿತ್ತು ಎಂಬುದನ್ನು ವಿವರಿಸಿ.

   (e) ಎರಡನೇ ಮಹಾಯುದ್ಧದ ನಂತರ, ಭಾರತದಲ್ಲಿ ಸಂಧಾನದ ಒಪ್ಪಂದಗಳಿಗಾಗಿ ಬ್ರಿಟಿಷರು ನಡೆಸಿದ ಪ್ರಯತ್ನಗಳನ್ನು ವಿವರವಾಗಿ ತಿಳಿಸಿ.

   (f) ಕರ್ನಾಟಕದಲ್ಲಿ ಕ್ವಿಟ್ ಇಂಡಿಯಾ ಚಳುವಳಿಯು ಬೀರಿದ ಪರಿಣಾಮ ಕುರಿತು ಟಿಪ್ಪಣಿ ಬರೆಯಿರಿ.

[Turn over

Teachingninja.in

3. Answer any ***two*** of the following questions in about 50 – 60 words each : *5×2=10*

(a) What do you understand by the concept of 'Satyagraha' as propagated by Gandhiji ?

(b) What was India's attitude to the Chinese occupation of Tibet in 1950 ?

(c) Write a note on the economic progress made by Karnataka in the post Independence era.

4. Write brief notes on ***all*** of the following in about 20 – 25 words each : *2×5=10*

(a) Sir Mirza Ismail

(b) Brahmanetara Parishad

(c) Birsa Munda Revolt

(d) Coorg Insurrection

(e) Nehru Committee Report of 1928

Teachingninja.in

**3.** ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಉತ್ತರ ಸುಮಾರು 50 – 60 ಪದಗಳಷ್ಟಿರಲಿ. *5×2=10*

(a) ಗಾಂಧೀಜಿಯವರು ಪ್ರಚುರ ಪಡಿಸಿದ 'ಸತ್ಯಾಗ್ರಹ' ಪರಿಕಲ್ಪನೆ ಕುರಿತಂತೆ ನೀವು ಅರ್ಥ ಮಾಡಿಕೊಂಡಿರುವುದನ್ನು ಬರೆಯಿರಿ.

(b) 1950ರಲ್ಲಿ ಚೀನಾವು ಟಿಬೆಟ್ ಅನ್ನು ವಶಪಡಿಸಿಕೊಂಡಿದ್ದರ ಬಗ್ಗೆ ಭಾರತದ ನಿಲುವು ಯಾವ ರೀತಿ ಇತ್ತು ?

(c) ಸ್ವಾತಂತ್ರ್ಯೋತ್ತರ ಕಾಲದಲ್ಲಿ ಕರ್ನಾಟಕವು ಸಾಧಿಸಿರುವ ಆರ್ಥಿಕ ಪ್ರಗತಿ ಕುರಿತು ಟಿಪ್ಪಣಿ ಬರೆಯಿರಿ.

**4.** ಕೆಳಗಿನ ಎಲ್ಲಾ ಪ್ರಶ್ನೆಗಳಿಗೂ ತಲಾ 20 ರಿಂದ 25 ಪದಗಳಿಗೆ ಮೀರದಂತೆ ಟಿಪ್ಪಣಿ ಬರೆಯಿರಿ : *2×5=10*

(a) ಸರ್ ಮಿರ್ಜಾ ಇಸ್ಮಾಯಿಲ್

(b) ಬ್ರಾಹ್ಮಣೇತರ ಪರಿಷತ್ತು

(c) ಬಿರ್ಸಾ ಮುಂಡಾ ಬಂಡಾಯ

(d) ಕೊಡಗಿನ ವ್ಯವಸ್ಥಿತ ಬಂಡಾಯ

(e) 1928ರ ನೆಹರೂ ಸಮಿತಿಯ ವರದಿ



Teachingninja.in

## PART B

5. Answer any ***three*** of the following questions in about 200 – 250 words each : *20×3=60*

(a) Discuss the possible strategies to maintain peace and harmony in the Kashmir valley.

(b) Discuss the options for eradicating Naxalism in the country.

(c) Discuss the implications of Indo-US nuclear deal in meeting energy needs.

(d) What is Sting Journalism ?

(e) Is a ban on cow slaughter viable, even if necessary ?

(f) Would a new States Reorganisation Commission solve our problems ?

6. Answer any ***five*** of the following questions in about 100 – 120 words each : *10×5=50*

(a) Comment on the growing unrest in North Korea.

(b) Can the incredible achievements of Saina Nehwal be a lesson for others ?

(c) What, according to you, is the impact of the recent stand of the Central Government on Belgaum ?

(d) Discuss the salient features of Global Investors Meet of Karnataka.

(e) Why does not inflation in food prices benefit farmers ?

(f) Is linking major rivers of India feasible ?

(g) Should we legalise betting in cricket matches ?

Teachingninja.in

## ಭಾಗ B

**5.** ಕೆಳಗಿನ ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಉತ್ತರ 200 ರಿಂದ 250 ಪದಗಳಿಗೆ ಮೀರದಂತಿರಬೇಕು : *20×3=60*

(a) ಕಾಶ್ಮೀರದ ಕಣಿವೆಯಲ್ಲಿ ಶಾಂತಿ ಮತ್ತು ಸಾಮರಸ್ಯವನ್ನು ಕಾಪಾಡಿಕೊಳ್ಳುವ ಸಾಧ್ಯತೆ ಇರುವಂಥ ತಂತ್ರೋಪಾಯಗಳನ್ನು ಕುರಿತು ಚರ್ಚಿಸಿ.

(b) ದೇಶದಲ್ಲಿ ನಕ್ಸಲ್‌ವಾದವನ್ನು ನಿರ್ಮೂಲನ ಮಾಡುವ (ಕ್ರಮ) ಆಯ್ಕೆಗಳನ್ನು ಕುರಿತು ಚರ್ಚಿಸಿ.

(c) ಶಕ್ತಿಯ ಅಗತ್ಯಗಳನ್ನು ಪೂರೈಸುವಲ್ಲಿ ಭಾರತ-ಯು.ಎಸ್ ನ್ಯೂಕ್ಲಿಯಾರ್ ಒಪ್ಪಂದದ ಪರಿಣಾಮಗಳ ಬಗ್ಗೆ ಚರ್ಚಿಸಿ.

(d) ಕುಟುಕು ಪತ್ರಿಕೋದ್ಯಮ (Sting Journalism) ಎಂದರೇನು ?

(e) ಗೋಹತ್ಯೆ ನಿಷೇಧವು, ಅಗತ್ಯವಾದರೂ ಕೂಡ ಯಶಸ್ವಿಯಾಗುವುದೇ ?

(f) ರಾಜ್ಯಗಳ ಪುನರ್ ಸಂಘಟನೆ ಕುರಿತ ಹೊಸ ಆಯೋಗದಿಂದ ನಮ್ಮ ಸಮಸ್ಯೆಗಳು ಪರಿಹಾರವಾಗುತ್ತವೆಯೆ ?

**6.** ಕೆಳಗಿನ ಯಾವುದಾದರೂ **ಐದು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಉತ್ತರ 100 ರಿಂದ 120 ಪದಗಳ ಮಿತಿಯಲ್ಲಿರಬೇಕು : *10×5=50*

(a) ಉತ್ತರ ಕೊರಿಯಾದಲ್ಲಿ ಹೆಚ್ಚುತ್ತಿರುವ ಅಶಾಂತಿ ಕುರಿತು ನಿಮ್ಮ ಅಭಿಪ್ರಾಯಗಳನ್ನು ಬರೆಯಿರಿ.

(b) ಸೈನಾ ನೆಹ್ವಾಲ್ ಅವರ ನಂಬಲಸಾಧ್ಯವಾದಂಥ ಸಾಧನೆಗಳು ಇತರರಿಗೆ ಪಾಠವಾಗಬಹುದೆ ?

(c) ಬೆಳಗಾವಿ ಕುರಿತಂತೆ ಕೇಂದ್ರ ಸರ್ಕಾರದ ಇತ್ತೀಚಿನ ನಿಲುವು ಯಾವ ರೀತಿ ಪರಿಣಾಮ ಬೀರಿದೆ ಎಂದು ನಿಮಗನ್ನಿಸುತ್ತದೆ ?

(d) ಕರ್ನಾಟಕದಲ್ಲಿ ನಡೆದ ಜಾಗತಿಕ ಹೂಡಿಕೆದಾರರ ಸಮಾವೇಶದ ವಿಶಿಷ್ಟ ಸ್ವರೂಪವನ್ನು ಕುರಿತು ಚರ್ಚಿಸಿ.

(e) ಆಹಾರದ ಬೆಲೆಗಳ ಹಣದುಬ್ಬರದಿಂದ ಏಕೆ ರೈತರಿಗೆ ಅನುಕೂಲವಾಗುವುದಿಲ್ಲ ?

(f) ಭಾರತದ ಪ್ರಮುಖ ನದಿಗಳ ಜೋಡಣೆಯು ಕಾರ್ಯ ಸಾಧ್ಯವೆ ?

(g) ನಾವು ಕ್ರಿಕೆಟ್ ಪಂದ್ಯಗಳ ಬೆಟ್ಟಿಂಗ್‌ನ್ನು ಕಾನೂನು ಬದ್ಧಗೊಳಿಸಬೇಕೆ ?



Teachingninja.in

7. Answer/write short notes on, any ***six*** of the following questions in about 50 – 60 words each : *5×6=30*

(a) Knowledge Processing Outsourcing

(b) Cloud seeding

(c) Energy drinks

(d) Mention the major projects envisaged by the Karnataka Government to overcome the power problems faced by the State.

(e) Highlights of XI Plan period with respect to Education and Health.

(f) Poverty amidst plenty

(g) Surrogate advertisements

(h) India's obssession with fair complexion

8. Write brief notes on ***all*** of the following questions in about 20 – 25 words each : *2×10=20*

(a) Civilian deaths

(b) Base rate

(c) Heritage trees

(d) Dawal Malik

(e) Women in Indian Army

(f) 3G Spectrum auction

(g) Fake encounters

(h) Akrama – Sakrama Scheme

(i) Padma Vibhushan Award

(j) GST

Teachingninja.in

**7.** ಕೆಳಗಿನ ಯಾವುದಾದರೂ ಆರು ಪ್ರಶ್ನೆಗಳಿಗೆ ಉತ್ತರಿಸಿ/ಟಿಪ್ಪಣಿ ಬರೆಯಿರಿ. ಉತ್ತರಗಳು ತಲಾ 50 – 60 ಪದಗಳ ಮಿತಿಯಲ್ಲಿರಬೇಕು : *5×6=30*

(a) ಜ್ಞಾನ ಪ್ರಕ್ರಮದ ಹೊರಗುತ್ತಿಗೆ

(b) ಮೋಡ ಬಿತ್ತನೆ (Cloud Seeding)

(c) ಶಕ್ತಿ ಪಾನೀಯಗಳು

(d) ರಾಜ್ಯವು ಎದುರಿಸುತ್ತಿರುವ ವಿದ್ಯುತ್ ಸಮಸ್ಯೆಗಳನ್ನು ನಿವಾರಿಸುವುದಕ್ಕಾಗಿ ಕರ್ನಾಟಕ ರಾಜ್ಯ ಸರ್ಕಾರವು ರೂಪಿಸಬೇಕೆಂದಿರುವ ಪ್ರಮುಖ ಪರಿಯೋಜನೆಗಳು ಯಾವುವು ಎಂಬುದನ್ನು ತಿಳಿಸಿ.

(e) ಶಿಕ್ಷಣ ಮತ್ತು ಆರೋಗ್ಯದ ಬಗ್ಗೆ XIನೇ ಯೋಜನೆ ಅವಧಿಯ ಪ್ರಮುಖಾಂಶಗಳನ್ನು ತಿಳಿಸಿ.

(f) ಸಮೃದ್ಧಿಯ ನಡುವೆ ಬಡತನ

(g) ಪರ್ಯಾಯ (Surrogate) ಜಾಹೀರಾತುಗಳು

(h) ಅಂದವಾದ ಮೈಬಣ್ಣದ ಬಗ್ಗೆ (ಗೌರವರ್ಣ) ಭಾರತೀಯರ ಗೀಳು

**8.** ಈ ಕೆಳಗಿನ **ಎಲ್ಲವುಗಳಿಗೂ** ಸಂಕ್ಷಿಪ್ತ ಟಿಪ್ಪಣಿ ಬರೆಯಿರಿ. ಪ್ರತಿಯೊಂದು ಉತ್ತರ 20 – 25 ಪದಗಳ ಮಿತಿಯಲ್ಲಿರಬೇಕು : *2×10=20*

(a) ಸೈನಿಕೇತರ ಜನರ ಸಾವುಗಳು (Civilian Deaths)

(b) ಆಧಾರ ದರ (Base Rate)

(c) ಪಾರಂಪರಿಕ ವೃಕ್ಷಗಳು

(d) ದವಾಲ್ ಮಲಿಕ್

(e) ಭಾರತೀಯ ಸೇನೆಯಲ್ಲಿ ಮಹಿಳೆಯರು

(f) 3G ಸ್ಪೆಕ್ಟ್ರಮ್ ಹರಾಜು

(g) ನಕಲಿ ಎನ್‌ಕೌಂಟರ್‌ಗಳು

(h) ಅಕ್ರಮ – ಸಕ್ರಮ ಯೋಜನೆ

(i) ಪದ್ಮ ವಿಭೂಷಣ ಪ್ರಶಸ್ತಿ

(j) GST

[Turn over

Teachingninja.in

## PART C

**9.** (a) The break-up of the Indian Union Budget for a certain year is shown at a glance in the table below :

**How the Indian rupee came and went for a certain year**

| Receipt | Paise | Expenditure | Paise |
|---|---|---|---|
| Internal borrowals | 24 | Interests | 26 |
| Excise | 21 | States' share | 15 |
| Customs | 15 | Central Plan | 14 |
| Non-debt capital receipts | 13 | Defence | 13 |
| Income Tax | 7 | State & UT plans | 10 |
| Corporate Tax | 7 | Non-Plan Expenditure | 10 |
| Borrowal from RBI | 8 | Subsidies | 6 |
| External borrowals | 2 | Non-Plan assistance to State and UT Governments | 6 |
| Other taxes | 3 | | |
| Total | 100 | | 100 |

Draw pie charts to allow comparisons within and between receipts and expenditures. Also write your main observations. 8

(b) A course of study has 2 tests, a mid-term examination and a final examination. The teacher considers the final to be 5 times as important as a test. The mid-term has thrice as much importance as each test. Rani scores 54 and 66 in the tests, 80 and 70 in the mid-term and final examinations respectively. What is her average score ? How many grace marks should the teacher add to the final examination score in order that the average rises to 75 ? 4

Teachingninja.in

## ಭಾಗ C

**9.** (a) ನಿರ್ದಿಷ್ಟ ವರ್ಷವೊಂದಕ್ಕೆ ಸಂಬಂಧಿಸಿದ ಭಾರತದ ಕೇಂದ್ರ ಸರ್ಕಾರದ ಬಜೆಟ್‌ನ ವಿಂಗಡಣೆಯ ಒಂದು ನೋಟವನ್ನು ಈ ಕೆಳಗಿನ ಕೋಷ್ಟಕದಲ್ಲಿ ಕೊಡಲಾಗಿದೆ :

**ನಿರ್ದಿಷ್ಟ ವರ್ಷವೊಂದರಲ್ಲಿ ಭಾರತದ ರೂಪಾಯಿ ಆದಾಯ ಹೇಗೆ ಬಂದಿತು ಮತ್ತು ಹೇಗೆ ಖರ್ಚಾಯಿತು**

| ಸ್ವೀಕೃತಿಗಳು | ಪೈಸೆ | ಖರ್ಚುಗಳು | ಪೈಸೆ |
|---|---|---|---|
| ಅಂತರಿಕ ಎರವಲುಗಳು | 24 | ಬಡ್ಡಿಗಳು | 26 |
| ಅಬಕಾರಿ | 21 | ರಾಜ್ಯಗಳ ಪಾಲುಗಳು | 15 |
| ಸೀಮಾ ಸುಂಕ | 15 | ಕೇಂದ್ರೀಯ ಯೋಜನೆ | 14 |
| ಋಣವಲ್ಲದ ಬಂಡವಾಳ ಸ್ವೀಕೃತಿಗಳು | 13 | ರಕ್ಷಣೆ | 13 |
| ಆದಾಯ ತೆರಿಗೆ | 7 | ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ ಯೋಜನೆಗಳು | 10 |
| ಕಾರ್ಪೊರೇಟ್ ತೆರಿಗೆ | 7 | ಯೋಜನೇತರ ವೆಚ್ಚ | 10 |
| ಆರ್.ಬಿ.ಐ. ನಿಂದ ಎರವಲುಗಳು | 8 | ಸಬ್ಸಿಡಿಗಳು | 6 |
| ಹೊರಗಿನ ಎರವಲುಗಳು | 2 | ರಾಜ್ಯ ಮತ್ತು ಕೇಂದ್ರಾಡಳಿತ ಸರ್ಕಾರಗಳಿಗೆ ಯೋಜನೇತರ ನೆರವು | 6 |
| ಇತರ ತೆರಿಗೆಗಳು | 3 | | |
| ಒಟ್ಟು | 100 | | 100 |

ಆಯಾ ಸ್ವೀಕೃತಿ ಮತ್ತು ಖರ್ಚುಗಳೊಳಗೆ, ಹಾಗೂ ಅವೆರಡರ ನಡುವೆ ತುಲನೆ ಮಾಡಲು ಸಾಧ್ಯವಾಗುವಂತೆ ಪೈ ಚಾರ್ಟ್‌ಗಳನ್ನು ಬರೆಯಿರಿ ಮತ್ತು ನೀವು ಮುಖ್ಯವಾಗಿ ಗಮನಿಸಿದ ಅಂಶಗಳನ್ನು ಬರೆಯಿರಿ. *8*

(b) ಒಂದು ಅಧ್ಯಯನದ ಅವಧಿಯಲ್ಲಿ 2 ಕಿರು ಪರೀಕ್ಷೆಗಳು, ಒಂದು ಮಧ್ಯ ಕಾಲೀನ ಪರೀಕ್ಷೆ ಹಾಗೂ ಒಂದು ಅಂತಿಮ ಪರೀಕ್ಷೆ ಇದೆ. ಅಂತಿಮ ಪರೀಕ್ಷೆಯು ಕಿರುಪರೀಕ್ಷೆಗಿಂತ (Test) 5 ಪಟ್ಟು ಮುಖ್ಯವಾಗಿರತಕ್ಕದ್ದು ಎಂದು ಶಿಕ್ಷಕರು ಭಾವಿಸುತ್ತಾರೆ. ಮಧ್ಯ ಕಾಲೀನ ಪರೀಕ್ಷೆಯು ಪ್ರತಿಯೊಂದು ಕಿರು ಪರೀಕ್ಷೆಯ ಮೂರರಷ್ಟು ಹೆಚ್ಚಿನ ಪ್ರಾಮುಖ್ಯತೆ ಉಳ್ಳದ್ದಾಗಿದೆ. ರಾಣಿ ಎಂಬ ವಿದ್ಯಾರ್ಥಿ ಕಿರುಪರೀಕ್ಷೆಗಳಲ್ಲಿ 54 ಮತ್ತು 66 ಅಂಕಗಳನ್ನು ಮಧ್ಯ ಕಾಲೀನ ಹಾಗೂ ಅಂತಿಮ ಪರೀಕ್ಷೆಯಲ್ಲಿ ಅನುಕ್ರಮವಾಗಿ 80 ಮತ್ತು 70 ಅಂಕಗಳನ್ನು ಗಳಿಸುತ್ತಾಳೆ. ಆಕೆಯ ಸರಾಸರಿ ಅಂಕ ಗಳಿಕೆ ಎಷ್ಟು ? ಸರಾಸರಿಯು 75 ಕ್ಕೆ ಬರಬೇಕಾದರೆ ಶಿಕ್ಷಕರು ಅಂತಿಮ ಪರೀಕ್ಷೆಯ ಗಳಿಕೆಗೆ ಎಷ್ಟು ಕೃಪಾಂಕಗಳನ್ನು ಸೇರಿಸಬೇಕು ? *4*



Teachingninja.in

(c) In a marriage hall, 120 marriages were held in a particular year. The age distribution of the brides is as follows :

| Age (years) | Number of brides |
|---|---|
| 18 – 20 | 12 |
| 20 – 22 | 30 |
| 22 – 23 | 30 |
| 23 – 24 | 22 |
| 24 – 26 | 18 |
| 26 – 28 | 8 |

(i) Draw the less than type of cumulative frequency curve.

(ii) Find the median from the curve.

(iii) Determine the maximum age among the youngest 30% of the brides. *8*

**10.** (a) For the data given below for two related variables X and Y, compute

(i) the coefficient of correlation, and

(ii) the coefficient of determination

Interpret the results obtained. *8*

| | | | | | | |
|---|---|---|---|---|---|---|
| X : | 2 | 3 | 5 | 4 | 11 | 5 |
| Y : | 20 | 25 | 34 | 30 | 40 | 31 |

Teachingninja.in

(c) ವಿವಾಹದ ಒಂದು ಛತ್ರದಲ್ಲಿ ನಿರ್ದಿಷ್ಟ ವರ್ಷವೊಂದರಲ್ಲಿ 120 ಮದುವೆಗಳು ನಡೆದಿವೆ. ವಧುಗಳ ವಯಸ್ಸಿನ ಹಂಚಿಕೆ ಈ ಕೆಳಕಂಡಂತಿದೆ :

| ವಯಸ್ಸು (ವರ್ಷಗಳಲ್ಲಿ) | ವಧುಗಳ ಸಂಖ್ಯೆ |
|---|---|
| 18 – 20 | 12 |
| 20 – 22 | 30 |
| 22 – 23 | 30 |
| 23 – 24 | 22 |
| 24 – 26 | 18 |
| 26 – 28 | 8 |

(i) Less than type ಸಂಚಿತ ಆವರ್ತ ವಕ್ರವನ್ನು ಬರೆಯಿರಿ.

(ii) ವಕ್ರದಿಂದ ಮೀಡಿಯನ್ ಅನ್ನು ಕಂಡುಹಿಡಿಯಿರಿ.

(iii) ಅತಿ ಚಿಕ್ಕವಯಸ್ಸಿನ 30% ವಧುಗಳ ಗರಿಷ್ಠ ವಯಸ್ಸನ್ನು ಕಂಡುಹಿಡಿಯಿರಿ. 8

10. (a) X ಮತ್ತು Y ಎಂಬ ಎರಡು ಸಂಬಂಧಿತ ವ್ಯತ್ಯಾಸಿಗಳಿಗೆ ಸಂಬಂಧಿಸಿದಂತೆ ಈ ಕೆಳಗೆ ಕೊಟ್ಟಿರುವ ದತ್ತಾಂಶವನ್ನು ಬಳಸಿಕೊಂಡು ಈ ಕೆಳಗಿನವುಗಳನ್ನು ಲೆಕ್ಕಹಾಕಿ :

(i) ಸಹಸಂಬಂಧ ಗುಣಾಂಕ ಮತ್ತು

(ii) ನಿರ್ಧಾರಣ ಗುಣಾಂಕ

ಪಡೆದ ಫಲಿತಾಂಶಗಳನ್ನು ವ್ಯಾಖ್ಯಾನಿಸಿ. 8

| | | | | | | |
|---|---|---|---|---|---|---|
| X : | 2 | 3 | 5 | 4 | 11 | 5 |
| Y : | 20 | 25 | 34 | 30 | 40 | 31 |

[Turn over

Teachingninja.in

(b) The following table shows the distribution of 50 companies according to the percentage of dividend declared during 2009 – 10.

**Distribution of companies by dividend percentage**

| Percentage of dividend | Number of companies |
|---|---|
| less than 10 | 5 |
| 10 – 14 | 6 |
| 15 – 19 | 16 |
| 20 – 24 | 13 |
| 25 – 29 | 4 |
| 30 – 34 | 5 |
| 35 – 39 | 1 |
| Above 39 | 0 |

Determine the following :

(i) Percentage of companies with dividend below 20%.

(ii) Proportion of companies with dividend above 29%.

(iii) Number of companies with dividend between 15% and 29%.

(iv) Number of companies with dividend not less than 20%. *8*

(c) In a class, 56 students offered Physics, 32 students took Chemistry and 44 students took Mathematics. Of these 21 took both Chemistry and Mathematics, 19 took both Chemistry and Physics and 12 took both Physics and Mathematics. If 8 students offered all the three subjects, find the total number of students in the class. *4*

Teachingninja.in

(b) 2009 – 10 ರ ಸಾಲಿನಲ್ಲಿ ಘೋಷಿಸಲಾದ ಲಾಭಾಂಶದ ಶೇಕಡಾವಾರಿನ ಪ್ರಕಾರ, ಈ ಕೆಳಕಂಡ ಕೋಷ್ಟಕವು 50 ಕಂಪನಿಗಳ ವಿತರಣೆಯನ್ನು ತೋರಿಸುತ್ತದೆ :

**ಲಾಭಾಂಶ ಶೇಕಡಾವಾರಿನ ಪ್ರಕಾರ ಕಂಪನಿಗಳ ವಿತರಣೆ**

| ಲಾಭಾಂಶದ ಶೇಕಡಾವಾರು | ಕಂಪನಿಗಳ ಸಂಖ್ಯೆ |
|---|---|
| 10 ಕ್ಕಿಂತ ಕಡಿಮೆ | 5 |
| 10 – 14 | 6 |
| 15 – 19 | 16 |
| 20 – 24 | 13 |
| 25 – 29 | 4 |
| 30 – 34 | 5 |
| 35 – 39 | 1 |
| 39 ಕ್ಕಿಂತ ಮೇಲೆ | 0 |

ಈ ಕೆಳಗಿನವುಗಳನ್ನು ಕಂಡು ಹಿಡಿಯಿರಿ :

(i) 20% ಗಿಂತ ಕಡಿಮೆ ಲಾಭಾಂಶದ ಕಂಪನಿಗಳ ಶೇಕಡಾವಾರು.

(ii) 29% ಗಿಂತ ಹೆಚ್ಚಿನ ಲಾಭಾಂಶದ ಕಂಪನಿಗಳ ಪ್ರಮಾಣ.

(iii) 15% ಮತ್ತು 29% ಲಾಭಾಂಶದ ನಡುವಿನ ಕಂಪನಿಗಳ ಸಂಖ್ಯೆ.

(iv) 20% ಗಿಂತ ಕಡಿಮೆಯಿಲ್ಲದ ಲಾಭಾಂಶದ ಕಂಪನಿಗಳ ಸಂಖ್ಯೆ. *8*

(c) ಒಂದು ತರಗತಿಯ 56 ವಿದ್ಯಾರ್ಥಿಗಳು ಭೌತಶಾಸ್ತ್ರವನ್ನು, 32 ವಿದ್ಯಾರ್ಥಿಗಳು ರಸಾಯನ ಶಾಸ್ತ್ರವನ್ನು ಮತ್ತು 44 ವಿದ್ಯಾರ್ಥಿಗಳು ಗಣಿತಶಾಸ್ತ್ರವನ್ನು ಆಯ್ಕೆಮಾಡಿಕೊಳ್ಳುತ್ತಾರೆ. ಇವರ ಪೈಕಿ 21 ವಿದ್ಯಾರ್ಥಿಗಳು ರಸಾಯನ ಶಾಸ್ತ್ರ ಹಾಗೂ ಗಣಿತ ಶಾಸ್ತ್ರಗಳೆರಡನ್ನು, 19 ವಿದ್ಯಾರ್ಥಿಗಳು ರಸಾಯನಶಾಸ್ತ್ರ ಮತ್ತು ಭೌತಶಾಸ್ತ್ರವನ್ನು ಮತ್ತು 12 ವಿದ್ಯಾರ್ಥಿಗಳು ಭೌತಶಾಸ್ತ್ರ ಮತ್ತು ಗಣಿತಶಾಸ್ತ್ರಗಳೆರಡನ್ನು ಆಯ್ಕೆಮಾಡಿ ಕೊಳ್ಳುತ್ತಾರೆ. 8 ವಿದ್ಯಾರ್ಥಿಗಳು ಈ ಮೂರೂ ವಿಷಯಗಳನ್ನು ಆಯ್ಕೆಮಾಡಿಕೊಂಡರೆ, ತರಗತಿಯಲ್ಲಿದ್ದ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ? ಕಂಡುಹಿಡಿಯಿರಿ. *4*

Teachingninja.in

CC

# 2010

## ಸಾಮಾನ್ಯ ಜ್ಞಾನ

## ಪ್ರಶ್ನೆಪತ್ರಿಕೆ 1

*ಸಮಯ : 3 ಗಂಟೆಗಳು ]* *[ ಗರಿಷ್ಠ ಅಂಕಗಳು : 300*

---

### ಸೂಚನೆಗಳು

*ಪ್ರತಿ ಪ್ರಶ್ನೆಯನ್ನು ಇಂಗ್ಲೀಷ್ ಹಾಗೂ ಕನ್ನಡದಲ್ಲಿ ಮುದ್ರಿಸಲಾಗಿದೆ. ಕನ್ನಡ ಪ್ರಶ್ನೆಗಳಲ್ಲಿ ಸಂದೇಹ ಉಂಟಾದರೆ, ದಯವಿಟ್ಟು ಆಂಗ್ಲ ಭಾಷೆಯ ಪ್ರಶ್ನೆಗಳನ್ನು ಗಮನಿಸುವುದು.*

*ನಿಮ್ಮ ಪ್ರವೇಶ ಪತ್ರದಲ್ಲಿ ನಮೂದಿಸಿರುವ ಮಾಧ್ಯಮದಲ್ಲೇ (ಇಂಗ್ಲೀಷ್ ಅಥವಾ ಕನ್ನಡ) ನೀವು ಉತ್ತರಗಳನ್ನು ಬರೆಯತಕ್ಕದ್ದು; ಇದನ್ನು ಉತ್ತರ ಪತ್ತಿಕೆಯ ಮುಖಪುಟದಲ್ಲಿ ಪ್ರತ್ಯೇಕವಾಗಿ ನೀಡಲಾದ ಜಾಗದಲ್ಲಿ ಸ್ಪಷ್ಟವಾಗಿ ನಮೂದಿಸತಕ್ಕದ್ದು. ಪ್ರವೇಶ ಪತ್ರದಲ್ಲಿ ನಮೂದಿಸದ ಮಾಧ್ಯಮದಲ್ಲಿ ಬರೆದ ಉತ್ತರಗಳಿಗೆ ಅಂಕಗಳನ್ನು ನೀಡಲಾಗುವುದಿಲ್ಲ.*

*ಅಭ್ಯರ್ಥಿಗಳು ಎಲ್ಲಾ ವಿಭಾಗಗಳ ಪ್ರಶ್ನೆಗಳನ್ನು ಉತ್ತರಿಸಬೇಕು.*

*ಪ್ರತಿ ಪ್ರಶ್ನೆಗೆ ಕಾದಿರಿಸಲಾದ ಅಂಕಗಳನ್ನು ಆ ಪ್ರಶ್ನೆಯ ಕೊನೆಯಲ್ಲಿ ನಮೂದಿಸಲಾಗಿದೆ.*

*ಪ್ರತಿ ಉತ್ತರದ ಉದ್ದವು ಸಾಮಾನ್ಯವಾಗಿ ಆ ಪ್ರಶ್ನೆಯ ಕೊನೆಯಲ್ಲಿ ನಮೂದಿಸಿರುವುದಕ್ಕಿಂತ ಉದ್ದ ಇರಕೂಡದು.*

---

**Note :** *The English version of the instructions is printed on the front cover of this question paper.*

SEAL

Teachingninja.in

DD

# 2010

## GENERAL STUDIES

### Paper 2

*Time : 3 Hours ]* *[ Maximum Marks : 300*

---

**INSTRUCTIONS**

*Each question is printed both in English and in Kannada. If any confusion arises in the Kannada version, please refer to the English Version of the questions.*

*Answers must be written in the medium specified (English or Kannada) in the Admission Ticket issued to you, which must be stated clearly on the cover of the answer book in the space provided for this purpose. No credit will be given for the answers written in a medium other than that specified in the Admission Ticket.*

*Candidates should attempt questions from all Parts.*

*The number of marks carried by each question is indicated with the question.*

*The length of the answers should not, as far as possible, exceed the specification given for the question.*

SEAL

---

ವಿಶೇಷ ಸೂಚನೆ : ಈ ಮೇಲ್ಕಂಡ ಸೂಚನೆಗಳ ಕನ್ನಡ ಭಾಷಾಂತರವನ್ನು ಈ ಪ್ರಶ್ನೆ ಪತ್ರಿಕೆಯ ಕೊನೆಯ ಪುಟದಲ್ಲಿ ಮುದ್ರಿಸಲಾಗಿದೆ.

Teachingninja.in

## PART A

1. Answer any ***one*** of the following questions. Restrict your answer to 200 – 250 words each : *20×1=20*

   (a) "Indian Federalism is the simultaneity of two processes – the unionization process and the regionalization process" – (Bishnu Pathak). Discuss.

   (b) Give an account of the experiment of decentralising governance in Karnataka.

2. Answer any ***three*** of the following questions. Restrict your answer to 100 – 125 words each : *10×3=30*

   (a) Assess the importance of the Preamble of the Indian Constitution.

   (b) Explain the method of Election of the President of India by illustrating the three formulae. What are the reasons behind the adoption of an indirect method of Election ?

   (c) Write a note on the objectives of the Nemmadi Project.

   (d) Bring out the major recommendations of the High Power Committee for Redressal of Regional Imbalances (HPCRRI) in Karnataka.

   (e) Bring out the observations of Justice Sadashiva Committee on the excesses committed by the Special Task Force.

3. Answer any ***four*** of the following questions. Restrict your answer to 50 – 55 words each : *5×4=20*

   (a) Narrate the circumstances under which the Janata Party came into existence in the Indian Politics. Trace the splits in that Party from 1979 to 1999 and the aftermath.

   (b) Write a short note on the composition and objectives of Karnataka Administrative Reforms Commission (KARC). What are its major recommendations on the Secretariat reforms ?

Teachingninja.in

## ಭಾಗ A

**1.** ಈ ಕೆಳಗಿನ ಯಾವುದಾದರೂ ಒಂದು ಪ್ರಶ್ನೆಗೆ ಉತ್ತರಿಸಿ. ನಿಮ್ಮ ಉತ್ತರ 200 – 250 ಪದಗಳಿಗೆ ಮೀರದಂತಿರಬೇಕು : *20×1=20*

(a) "Indian Federalism is the simultaneity of two processes – the unionization process and the regionalization process" – (ಬಿಷ್ಣು ಪಾಠಕ್). ಈ ಹೇಳಿಕೆ ಕುರಿತು ಚರ್ಚಿಸಿ.

(b) ಕರ್ನಾಟಕದಲ್ಲಿ ಆಡಳಿತದ ರೀತಿಯನ್ನು ವಿಕೇಂದ್ರೀಕರಿಸಿದ ಪ್ರಯೋಗವನ್ನು ಕುರಿತು ವಿವರವಾಗಿ ತಿಳಿಸಿ.

**2.** ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಉತ್ತರ 100 – 125 ಪದಗಳಿಗೆ ಮೀರದಂತಿರಬೇಕು : *10×3=30*

(a) ಭಾರತೀಯ ಸಂವಿಧಾನದ ಪ್ರಸ್ತಾವನೆಯ ಪ್ರಾಮುಖ್ಯತೆಯನ್ನು ಕುರಿತು ವಿವೇಚಿಸಿ.

(b) ಮೂರು ಸೂತ್ರಗಳನ್ನು ವಿವರಿಸುವ ಮೂಲಕ ಭಾರತದ ರಾಷ್ಟ್ರಪತಿಯವರ ಆಯ್ಕೆಗಾಗಿ ನಡೆಯುವ ಚುನಾವಣಾ ವಿಧಾನವನ್ನು ತಿಳಿಸಿ. ಪರೋಕ್ಷ ರೂಪದ ಚುನಾವಣಾ ವಿಧಾನವನ್ನು ಅಳವಡಿಸಿಕೊಂಡಿರುವ ಹಿನ್ನೆಲೆಯಲ್ಲಿರುವ ಕಾರಣಗಳೇನು ?

(c) ನೆಮ್ಮದಿ ಪರಿಯೋಜನೆಯ ಧ್ಯೇಯಗಳನ್ನು ಕುರಿತು ಒಂದು ಟಿಪ್ಪಣಿ ಬರೆಯಿರಿ.

(d) ಕರ್ನಾಟಕದಲ್ಲಿ ಪ್ರಾದೇಶಿಕ ಅಸಮತೋಲನಗಳ ನಿವಾರಣೆಗಾಗಿ ರಚಿತವಾಗಿರುವ ಉನ್ನತ ಅಧಿಕಾರ ಸಮಿತಿಯ (HPCRRI) ಪ್ರಮುಖ ಶಿಫಾರಸುಗಳು ಯಾವುವು ಎಂಬುದನ್ನು ನಿರೂಪಿಸಿ.

(e) ವಿಶೇಷ ಕಾರ್ಯ ಪಡೆಯು ನಡೆಸಿದ ಅತಿರೇಕಗಳನ್ನು ಕುರಿತಂತೆ, ನ್ಯಾಯಮೂರ್ತಿ ಸದಾಶಿವ ಸಮಿತಿಯ ಅವಲೋಕನಗಳೇನು ಎಂಬುದನ್ನು ನಿರೂಪಿಸಿ.

**3.** ಕೆಳಗಿನ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಉತ್ತರ 50 ರಿಂದ 55 ಪದಗಳಿಗೆ ಮೀರದಂತಿರಬೇಕು : *5×4=20*

(a) ಭಾರತದ ರಾಜಕೀಯದಲ್ಲಿ ಜನತಾ ಪಕ್ಷವು ಯಾವ ಸನ್ನಿವೇಶಗಳ ಹಿನ್ನೆಲೆಯಲ್ಲಿ ಅಸ್ತಿತ್ವಕ್ಕೆ ಬಂದಿತು ಎಂಬುದನ್ನು ವಿವರಿಸಿ. 1979 ರಿಂದ 1999 ರ ವರೆಗೆ ಈ ಪಕ್ಷದಲ್ಲಿ ಆದ ಒಡಕುಗಳನ್ನು ಮತ್ತು ಆನಂತರದ ಪರಿಣಾಮಗಳನ್ನು ಗುರುತಿಸಿ

(b) ಕರ್ನಾಟಕ ಆಡಳಿತ ಸುಧಾರಣೆಗಳ ಆಯೋಗ (KARC) ದ ಸಂರಚನೆ ಹಾಗೂ ಧ್ಯೇಯಗಳನ್ನು ಕುರಿತಂತೆ ಕಿರುಟಿಪ್ಪಣಿ ಬರೆಯಿರಿ. ಸಚಿವಾಲಯದ ಸುಧಾರಣೆಗಳ ಬಗ್ಗೆ ಅದು ಮಾಡಿರುವ ಪ್ರಮುಖ ಶಿಫಾರಸುಗಳು ಯಾವುವು ?

[Turn over

Teachingninja.in

(c) Examine the role of the Right to Information Act (RTI) in reforming Indian Administration.

(d) Examine the issues involved in Amendment of Panchayat Raj Act of 1993.

(e) What are the factors that influence the effective participation of women in the new Panchayati Raj Institutions ?

(f) Comment on the concept of social justice with an example of government policy in ensuring social justice.

**4.** Write short notes on ***all*** of the following. Restrict your answer to 20 – 25 words each : *2×10=20*

(a) Inamdars

(b) Royal Commission

(c) Unique Identification Authority of India

(d) Gazetted post

(e) New Flag Code of India

(f) Objective of Lokayukta Act 1984

(g) Public Accounts Committee

(h) Lokpal

(i) Ashraya Yojana

(j) PPP Model

Teachingninja.in

(c) ಭಾರತದ ಆಡಳಿತವನ್ನು ಸುಧಾರಿಸುವ ದಿಸೆಯಲ್ಲಿ ಮಾಹಿತಿ ಹಕ್ಕು ಕಾಯಿದೆಯ (RTI) ಪಾತ್ರವನ್ನು ಪರಿಶೀಲಿಸಿ.

(d) 1993ರ ಪಂಚಾಯತ್ ರಾಜ್ ಅಧಿನಿಯಮದ ತಿದ್ದುಪಡಿಗಳಿಗೆ ಸಂಬಂಧಿಸಿದ ವಿವಾದಗಳನ್ನು ಕುರಿತು ಪರೀಕ್ಷಿಸಿ.

(e) ಹೊಸ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಮಹಿಳೆಯರು ಪರಿಣಾಮಕಾರಿಯಾಗಿ ಭಾಗವಹಿಸುವುದರ ಮೇಲೆ ಪ್ರಭಾವ ಬೀರುವ ಸಂಗತಿಗಳು ಯಾವುವು ?

(f) ಸಾಮಾಜಿಕ ನ್ಯಾಯವನ್ನು ಖಚಿತಪಡಿಸುವ ದಿಕ್ಕಿನಲ್ಲಿ ಸರ್ಕಾರದ ನೀತಿಯ ಒಂದು ಉದಾಹರಣೆಯೊಂದಿಗೆ ಸಾಮಾಜಿಕ ನ್ಯಾಯದ ಪರಿಕಲ್ಪನೆ ಕುರಿತ ನಿಮ್ಮ ಅಭಿಪ್ರಾಯ ಬರೆಯಿರಿ.

**4.** ಕೆಳಗಿನ **ಎಲ್ಲವುಗಳಿಗೂ** ಕಿರುಟಿಪ್ಪಣಿ ಬರೆಯಿರಿ. ಪ್ರತಿಯೊಂದು ಉತ್ತರವೂ 20 ರಿಂದ 25 ಪದಗಳ ಮಿತಿಯಲ್ಲಿರಬೇಕು. *2×10=20*

(a) ಇನಾಂದಾರರು

(b) ರಾಯಲ್ ಕಮಿಶನ್

(c) ಭಾರತದ ವಿಶಿಷ್ಟ ಗುರುತು ಪತ್ರ ಪ್ರಾಧಿಕಾರ

(d) ಗೆಜೆಟೆಡ್ ಹುದ್ದೆ

(e) ಭಾರತದ ಹೊಸ ಧ್ವಜ ಸಂಹಿತೆ

(f) 1984ರ ಲೋಕಾಯುಕ್ತ ಅಧಿನಿಯಮದ ಧ್ಯೇಯ

(g) ಸಾರ್ವಜನಿಕ ಲೆಕ್ಕಪತ್ರ ಸಮಿತಿ

(h) ಲೋಕಪಾಲರು

(i) ಆಶ್ರಯ ಯೋಜನೆ

(j) ಪಿಪಿಪಿ ಮಾಡೆಲ್



Teachingninja.in

## PART B

**5.** Answer any ***one*** of the following questions. Restrict your answer to 200 – 250 words each : *20×1=20*

(a) Bring out the impact of 'Global Economic and Financial Crisis' of 2008 – 09 on the Indian economy. Highlight the measures taken by the Central Government to overcome the crisis.

(b) Bring out the basic objectives and features of Karnataka's New Agricultural Policy 2006. To what extent does it help to meet present challenges in agriculture ?

**6.** Answer any ***three*** of the following questions. Restrict your answer to 100 – 125 words each : *10×3=30*

(a) Explain the objectives and achievements of NREGS in Karnataka.

(b) Discuss the Regional Disparities and Special Development Plan 2003 – 10 of Karnataka.

(c) Examine the need for Second Green Revolution in India. Explain the basic components of this revolution.

(d) Examine National Highway Development Project (NHDP) as a major organisation in the development of road transport.

(e) Explain the salient features of National Rural Health Mission (NRHM) Programme.

**7.** Answer any ***four*** of the following questions. Restrict your answer to 50 – 55 words each : *5×4=20*

(a) Explain the steps taken by the SEBI for healthy capital market development in India.

(b) Discuss the strategy of inclusive growth adopted in the Eleventh Five Year Plan of India.

(c) Explain the package of services provided under Integrated Child Development Services (ICDS) Programme.

(d) What are Non-Tariff Barriers (NTBs) ? How do they affect India's trade ?

(e) Write a note on Prime Minister's Rozgar Yojana.

(f) Highlight the role of Self-help Groups in rural women empowerment.

Teachingninja.in

## ಭಾಗ B

**5.** ಕೆಳಗಿನ ಯಾವುದಾದರೂ ಒಂದು ಪ್ರಶ್ನೆಗೆ ಉತ್ತರಿಸಿ. ನಿಮ್ಮ ಉತ್ತರ 200 – 250 ಪದಗಳಿಗೆ ಮೀರದಂತಿರಲಿ : *20×1=20*

(a) 2008 – 09 ರ "ಜಾಗತಿಕ ಆರ್ಥಿಕ ಮತ್ತು ಹಣಕಾಸಿನ ಬಿಕ್ಕಟ್ಟು" ಭಾರತದ ಅರ್ಥವ್ಯವಸ್ಥೆಯ ಮೇಲೆ ಬೀರಿದ ಪರಿಣಾಮಗಳನ್ನು ನಿರೂಪಿಸಿ. ಈ ಬಿಕ್ಕಟ್ಟನ್ನು ಪರಿಹರಿಸುವುದಕ್ಕಾಗಿ ಕೇಂದ್ರ ಸರಕಾರವು ಕೈಗೊಂಡ ಕ್ರಮಗಳ ಮುಖ್ಯಾಂಶಗಳನ್ನು ಬರೆಯಿರಿ.

(b) ಕರ್ನಾಟಕದ ಹೊಸ ಕೃಷಿ ನೀತಿ 2006 ರ ಮೂಲಧ್ಯೇಯಗಳು ಹಾಗೂ ಸ್ವರೂಪವನ್ನು ನಿರೂಪಿಸಿ. ಕೃಷಿ ಕ್ಷೇತ್ರದಲ್ಲಿರುವ ಪ್ರಸ್ತುತ ಸವಾಲುಗಳನ್ನು ಎದುರಿಸಲು ಇದು ಎಷ್ಟರ ಮಟ್ಟಿಗೆ ಸಹಾಯಕವಾಗಿದೆ ? ತಿಳಿಸಿ.

**6.** ಕೆಳಗಿನವುಗಳಲ್ಲಿ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಉತ್ತರ 100 – 125 ಪದಗಳಿಗೆ ಮೀರದಂತಿರಲಿ : *10×3=30*

(a) ಕರ್ನಾಟಕದಲ್ಲಿ NREGSನ ಧ್ಯೇಯಗಳು ಮತ್ತು ಸಾಧನೆಗಳನ್ನು ವಿವರಿಸಿ.

(b) ಕರ್ನಾಟಕದ ಪ್ರಾದೇಶಿಕ ತಾರತಮ್ಯಗಳು ಹಾಗೂ ವಿಶೇಷ ಅಭಿವೃಧಿ ಯೋಜನೆ 2003 – 10, ಈ ಕುರಿತು ಚರ್ಚಿಸಿ.

(c) ಭಾರತದಲ್ಲಿ ಎರಡನೇ ಹಸಿರು ಕ್ರಾಂತಿ ನಡೆಯಬೇಕಾದ ಅಗತ್ಯ ಕುರಿತು ಪರಿಶೀಲಿಸಿ. ಈ ಕ್ರಾಂತಿಯು ಮೂಲತಃ ಒಳಗೊಂಡಿರಬೇಕಾದ ಅಂಶಗಳನ್ನು ವಿವರಿಸಿ.

(d) ರಸ್ತೆ ಸಾರಿಗೆ ಅಭಿವೃದ್ಧಿಯ ದಿಕ್ಕಿನಲ್ಲಿ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪರಿಯೋಜನೆಯು (NHDP) ಒಂದು ಪ್ರಮುಖ ಸಂಸ್ಥೆಯಾಗಿರುವುದನ್ನು ಪರಿಶೀಲಿಸಿ.

(e) ರಾಷ್ಟ್ರೀಯ ಗ್ರಾಮೀಣ ಆರೋಗ್ಯ ನಿಯೋಗ (NRHM) ಕಾರ್ಯಕ್ರಮದ ವೈಶಿಷ್ಟ್ಯವನ್ನು ವಿವರಿಸಿ.

**7.** ಕೆಳಗಿನ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಉತ್ತರ 50 – 55 ಪದಗಳಿಗೆ ಮೀರದಂತಿರ ಬೇಕು : *5×4=20*

(a) ಭಾರತದಲ್ಲಿ ಆರೋಗ್ಯಕರವಾದ ಬಂಡವಾಳ ಮಾರುಕಟ್ಟೆ ಅಭಿವೃದ್ಧಿಗಾಗಿ, SEBI ಕೈಗೊಂಡಿರುವ ಕ್ರಮಗಳನ್ನು ಕುರಿತು ವಿವರಿಸಿ.

(b) ಭಾರತದ ಹನ್ನೊಂದನೇ ಪಂಚವಾರ್ಷಿಕ ಯೋಜನೆಯಲ್ಲಿ ಅಳವಡಿಸಿಕೊಳ್ಳಲಾಗಿರುವ ಸಮಾವಿಷ್ಟ ಬೆಳವಣಿಗೆಯ (inclusive growth) ತಂತ್ರವನ್ನು ಕುರಿತು ಚರ್ಚಿಸಿ.

(c) ಸಮಗ್ರ ಶಿಶು ಅಭಿವೃದ್ಧಿ ಸೇವೆಗಳ (ICDS) ಕಾರ್ಯಕ್ರಮದ ಅಡಿಯಲ್ಲಿ ಒಟ್ಟಾಗಿ ಒದಗಿಸಲಾಗುವ ಸೇವೆಗಳನ್ನು ವಿವರಿಸಿ.

(d) Non-Tariff Barriers (NTBs) ಎಂದರೇನು ? ಭಾರತದ ವ್ಯಾಪಾರದ ಮೇಲೆ ಅವು ಹೇಗೆ ಪರಿಣಾಮ ಬೀರುತ್ತವೆ ?

(e) ಪ್ರಧಾನ ಮಂತ್ರಿಯವರ ರೋಜ್‌ಗಾರ್ ಯೋಜನೆಯನ್ನು ಕುರಿತು ಟಿಪ್ಪಣಿ ಬರೆಯಿರಿ.

(f) ಗ್ರಾಮೀಣ ಮಹಿಳೆಯರ ಸಬಲೀಕರಣದಲ್ಲಿ ಸ್ವಸಹಾಯ ಗುಂಪುಗಳ ಪಾತ್ರದ ಮುಖ್ಯಾಂಶಗಳನ್ನು ತಿಳಿಸಿ.

[Turn over

Teachingninja.in

8. Write short notes on ***all*** of the following. Restrict your answer to 20 – 25 words each : *2×10=20*

(a) Kissan Credit Card (KCC)

(b) Jal Nirmal Project

(c) Karnataka Knowledge Commission

(d) Planning Commission of India

(e) Child Labour

(f) Sarva Shiksha Abhiyan

(g) Yashaswini Health Insurance for Farmers

(h) Service Tax

(i) Special Economic Zones (SEZs)

(j) Rashtriya Swasthya Bima Yojana

Teachingninja.in

8. ಕೆಳಗಿನ **ಎಲ್ಲವುಗಳಿಗೂ** ಕಿರುಟಿಪ್ಪಣಿ ಬರೆಯಿರಿ. ಪ್ರತಿಯೊಂದು ಉತ್ತರವೂ 20 ರಿಂದ 25 ಪದಗಳ ಮಿತಿಯಲ್ಲಿರಬೇಕು. *2×10=20*

(a) ಕಿಸಾನ್ ಕ್ರೆಡಿಟ್ ಕಾರ್ಡ್ (KCC)

(b) ಜಲ ನಿರ್ಮಲ ಪರಿಯೋಜನೆ

(c) ಕರ್ನಾಟಕ ಜ್ಞಾನ ಆಯೋಗ

(d) ಭಾರತದ ಯೋಜನಾ ಆಯೋಗ

(e) ಬಾಲಕಾರ್ಮಿಕ ದುಡಿಮೆ

(f) ಸರ್ವ ಶಿಕ್ಷಾ ಅಭಿಯಾನ

(g) ರೈತರಿಗಾಗಿ ಯಶಸ್ವಿನಿ ಆರೋಗ್ಯ ವಿಮೆ

(h) ಸೇವಾ ತೆರಿಗೆ

(i) ವಿಶೇಷ ಆರ್ಥಿಕ ವಲಯಗಳು (SEZs)

(j) ರಾಷ್ಟ್ರೀಯ ಸ್ವಾಸ್ಥ್ಯ ವಿಮಾ ಯೋಜನೆ

[Turn over

Teachingninja.in

## PART C

9. Answer any ***one*** of the following questions. Restrict your answer to 200 – 250 words. *20×1=20*

(a) Give an account of agro-climatic regions of Karnataka.

(b) Which are the major wheat producing regions in India ? Describe the main characteristics of such regions.

10. Answer any ***one*** of the following questions. Restrict your answer to 100 – 150 words. *10×1=10*

(a) Discuss the major irrigation projects of India.

(b) Which are the major industrial corridors in India ?

11. Answer any ***two*** of the following questions. Restrict your answer to 50 words each. *5×2=10*

(a) Discuss about the petroleum production and imports of India.

(b) Describe manganese ore reserves in Karnataka State.

(c) Write a note on cloud burst.

Teachingninja.in

## ಭಾಗ C

**9.** ಈ ಕೆಳಗಿನ ಯಾವುದಾದರೂ **ಒಂದು** ಪ್ರಶ್ನೆಗೆ ಉತ್ತರಿಸಿ. ನಿಮ್ಮ ಉತ್ತರ 200 – 250 ಪದಗಳಿಗೆ ಮೀರದಂತಿರಬೇಕು.

*20×1=20*

(a) ಕರ್ನಾಟಕದ ಕೃಷಿ - ಹವಾಗುಣ ಪ್ರದೇಶಗಳನ್ನು ಕುರಿತಂತೆ ವಿವರವಾಗಿ ಬರೆಯಿರಿ.

(b) ಭಾರತದಲ್ಲಿ ಗೋಧಿ ಉತ್ಪಾದನೆಯ ಪ್ರಮುಖ ಪ್ರದೇಶಗಳು ಯಾವುವು ? ಇಂತಹ ಪ್ರದೇಶಗಳ ಮುಖ್ಯ ಲಕ್ಷಣಗಳನ್ನು ವರ್ಣಿಸಿ.

**10.** ಈ ಕೆಳಗಿನ ಯಾವುದಾದರೂ **ಒಂದು** ಪ್ರಶ್ನೆಗೆ ಉತ್ತರಿಸಿ. ನಿಮ್ಮ ಉತ್ತರ 100 – 150 ಪದಗಳಿಗೆ ಮೀರದಂತಿರಬೇಕು. *10×1=10*

(a) ಭಾರತದ ಪ್ರಮುಖ ನೀರಾವರಿ ಪರಿಯೋಜನೆಗಳನ್ನು ಕುರಿತು ಚರ್ಚಿಸಿ.

(b) ಭಾರತದ ಪ್ರಮುಖ ಕೈಗಾರಿಕಾ ವಿಭಾಗಗಳು (ಕಾರಿಡಾರ್‌ಗಳು) ಯಾವುವು ?

**11.** ಈ ಕೆಳಗಿನ ಯಾವುದಾದರೂ **ಎರಡು** ಪ್ರಶ್ನೆಗಳಿಗೆ ಉತ್ತರಿಸಿ. ನಿಮ್ಮ ಉತ್ತರ ತಲಾ 50 ಪದಗಳಿಗೆ ಮೀರದಂತಿರಬೇಕು. *5×2=10*

(a) ಭಾರತದ ಪೆಟ್ರೋಲಿಯಂ ಉತ್ಪಾದನೆ ಮತ್ತು ಆಮದುಗಳನ್ನು ಕುರಿತು ಚರ್ಚಿಸಿ.

(b) ಕರ್ನಾಟಕ ರಾಜ್ಯದ ಮ್ಯಾಂಗನೀಸ್ ಅದಿರು ನಿಕ್ಷೇಪಗಳ ಬಗ್ಗೆ ವಿವರಿಸಿ.

(c) ಮೇಘಸ್ಫೋಟ (cloud burst) ದ ಕುರಿತು ಟಿಪ್ಪಣಿ ಬರೆಯಿರಿ.

[Turn over

Teachingninja.in

## PART D

12. Answer any ***one*** of the following questions. Restrict your answer to 200 – 250 words each : *20×1=20*

(a) Discuss the effects of nuclear power plants on the environment and its mitigative measures.

(b) Biotechnology is said to be the technology of the future. List out the objectives of the Biotechnology policies adopted by the Karnataka Government since the year 2000, and give an account of the steps taken by the government.

13. Write brief notes on any ***four*** of the following. Restrict your answer to 100 – 120 words each. *10×4=40*

(a) Rain water harvesting

(b) Stem cells

(c) Gene therapy

(d) Satellites

(e) Carbon nanotubes

(f) Optical fibre in medical diagnosis

14. Write short notes on ***all*** of the following. Restrict your answer to 20 – 25 words each. *2×10=20*

(a) Chikungunya Virus

(b) Solar Energy

(c) Chandrayan-II

(d) Kishore Vaigyanik Protsahan Yojana (KVPY)

(e) Bio-Informatics

(f) National Institute of Mental Health and Neuro Sciences (NIMHANS)

(g) Central Food Technological Research Institute (CFTRI)

(h) Bio-fuels

(i) Skin cancer and Ultraviolet rays

(j) Nanotherapy

Teachingninja.in

## ಭಾಗ D

**12.** ಕೆಳಗಿನ ಯಾವುದಾದರೂ ಒಂದು ಪ್ರಶ್ನೆಗೆ ಉತ್ತರಿಸಿ. ನಿಮ್ಮ ಉತ್ತರ 200 ರಿಂದ 250 ಪದಗಳ ಮಿತಿಯಲ್ಲಿರಬೇಕು : *20×1=20*

(a) ಪರಿಸರದ ಮೇಲೆ ಅಣು ವಿದ್ಯುತ್ ಸ್ಥಾವರಗಳು ಉಂಟುಮಾಡುವ ಪರಿಣಾಮಗಳನ್ನು ಮತ್ತು ಇವುಗಳ ತೀವ್ರತೆಯನ್ನು ಕಡಿಮೆ ಮಾಡುವ ಕ್ರಮಗಳನ್ನು ಕುರಿತಂತೆ ಚರ್ಚಿಸಿ.

(b) ಜೈವಿಕ ತಂತ್ರಜ್ಞಾನವನ್ನು ಭವಿಷ್ಯದ ತಂತ್ರಜ್ಞಾನ ಎಂದು ಹೇಳಲಾಗುತ್ತದೆ. 2000 ಇಸವಿಯಿಂದಾರಂಭಿಸಿ ಕರ್ನಾಟಕ ಸರ್ಕಾರವು ಅಂಗೀಕರಿಸಿರುವ ಜೈವಿಕ ತಂತ್ರಜ್ಞಾನ ನೀತಿಗಳ ಧ್ಯೇಯಗಳನ್ನು ಪಟ್ಟಿಮಾಡಿ ಮತ್ತು ಸರ್ಕಾರವು ಕೈಗೊಂಡಿರುವ ಕ್ರಮಗಳನ್ನು ನಿರೂಪಿಸಿ.

**13.** ಕೆಳಗಿನ ಯಾವುದಾದರೂ **ನಾಲ್ಕು** ವಿಷಯಗಳ ಬಗ್ಗೆ ಕಿರುಟಿಪ್ಪಣಿ ಬರೆಯಿರಿ. ಪ್ರತಿಯೊಂದು ಉತ್ತರವೂ 100 ರಿಂದ 120 ಪದಗಳ ಮಿತಿಯಲ್ಲಿರಬೇಕು. *10×4=40*

(a) ಮಳೆ ನೀರಿನ ಕೊಯ್ಲು

(b) ಕಾಂಡ ಕೋಶಗಳು (Stem Cells)

(c) ಜೀನ್‌ಥೆರಪಿ

(d) ಉಪಗ್ರಹಗಳು (ಸ್ಯಾಟಲೈಟ್‌ಗಳು)

(e) ಇಂಗಾಲದ ನ್ಯಾನೋಟ್ಯೂಬ್‌ಗಳು

(f) ವೈದ್ಯಕೀಯ ರೋಗ ಪತ್ತೆಯಲ್ಲಿ ದ್ಯುತೀಯ ಎಳೆಗಳು

**14.** ಕೆಳಗಿನ **ಎಲ್ಲವುಗಳಿಗೂ** ಕಿರುಟಿಪ್ಪಣಿ ಬರೆಯಿರಿ. ಪ್ರತಿಯೊಂದು ಉತ್ತರವೂ 20 ರಿಂದ 25 ಪದಗಳ ಮಿತಿಯಲ್ಲಿರಬೇಕು. *2×10=20*

(a) ಚಿಕುನ್ ಗುನ್ಯಾ ವೈರಸ್

(b) ಸೌರ ಶಕ್ತಿ

(c) ಚಂದ್ರಯಾನ II

(d) ಕಿಶೋರ ವೈಜ್ಞಾನಿಕ ಪ್ರೋತ್ಸಾಹನ ಯೋಜನೆ (KVPY)

(e) ಜೈವಿಕ ಮಾಹಿತಿ ತಂತ್ರಜ್ಞಾನ (Bio-Informatics)

(f) ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರ ವಿಜ್ಞಾನಗಳ ಸಂಸ್ಥೆ (NIMHANS)

(g) ಕೇಂದ್ರೀಯ ಆಹಾರ ತಂತ್ರಜ್ಞಾನ ಸಂಶೋಧನ ಸಂಸ್ಥೆ (CFTRI)

(h) ಜೈವಿಕ ಇಂಧನಗಳು

(i) ಚರ್ಮದ ಕ್ಯಾನ್ಸರ್ ಮತ್ತು ಅತಿನೇರಳೆ ಕಿರಣಗಳು

(j) ನ್ಯಾನೋಥೆರಪಿ (ನ್ಯಾನೋ ಚಿಕಿತ್ಸೆ)

Teachingninja.in

DD

# 2010

# ಸಾಮಾನ್ಯ ಜ್ಞಾನ

## ಪ್ರಶ್ನೆಪತ್ರಿಕೆ 2

*ಸಮಯ : 3 ಗಂಟೆಗಳು ]* *[ ಗರಿಷ್ಠ ಅಂಕಗಳು : 300*

### ಸೂಚನೆಗಳು

*ಪ್ರತಿ ಪ್ರಶ್ನೆಯನ್ನು ಇಂಗ್ಲೀಷ್ ಹಾಗೂ ಕನ್ನಡದಲ್ಲಿ ಮುದ್ರಿಸಲಾಗಿದೆ. ಕನ್ನಡ ಪ್ರಶ್ನೆಗಳಲ್ಲಿ ಸಂದೇಹ ಉಂಟಾದರೆ, ದಯವಿಟ್ಟು ಆಂಗ್ಲ ಭಾಷೆಯ ಪ್ರಶ್ನೆಗಳನ್ನು ಗಮನಿಸುವುದು.*

*ನಿಮ್ಮ ಪ್ರವೇಶ ಪತ್ರದಲ್ಲಿ ನಮೂದಿಸಿರುವ ಮಾಧ್ಯಮದಲ್ಲೇ (ಇಂಗ್ಲೀಷ್ ಅಥವಾ ಕನ್ನಡ) ನೀವು ಉತ್ತರಗಳನ್ನು ಬರೆಯತಕ್ಕದ್ದು; ಇದನ್ನು ಉತ್ತರ ಪತ್ರಿಕೆಯ ಮುಖಪುಟದಲ್ಲಿ ಪ್ರತ್ಯೇಕವಾಗಿ ನೀಡಲಾದ ಜಾಗದಲ್ಲಿ ಸ್ಪಷ್ಟವಾಗಿ ನಮೂದಿಸತಕ್ಕದ್ದು. ಪ್ರವೇಶ ಪತ್ರದಲ್ಲಿ ನಮೂದಿಸದ ಮಾಧ್ಯಮದಲ್ಲಿ ಬರೆದ ಉತ್ತರಗಳಿಗೆ ಅಂಕಗಳನ್ನು ನೀಡಲಾಗುವುದಿಲ್ಲ.*

*ಅಭ್ಯರ್ಥಿಗಳು ಎಲ್ಲಾ ವಿಭಾಗಗಳ ಪ್ರಶ್ನೆಗಳನ್ನು ಉತ್ತರಿಸಬೇಕು.*

*ಪ್ರತಿ ಪ್ರಶ್ನೆಗೆ ಕಾದಿರಿಸಲಾದ ಅಂಕಗಳನ್ನು ಆ ಪ್ರಶ್ನೆಯ ಕೊನೆಯಲ್ಲಿ ನಮೂದಿಸಲಾಗಿದೆ.*

*ಪ್ರತಿ ಉತ್ತರದ ಉದ್ದವು ಸಾಮಾನ್ಯವಾಗಿ ಆ ಪ್ರಶ್ನೆಯ ಕೊನೆಯಲ್ಲಿ ನಮೂದಿಸಿರುವುದಕ್ಕಿಂತ ಉದ್ದ ಇರಕೂಡದು.*

***Note :*** *The English version of the instructions is printed on the front cover of this question paper.*

SEAL

Teachingninja.in